ಸಾಕ್ಷಿಯನ್ನು ದಿನಾಂಕಃ 08-09-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಃ ಶ್ರೀ ಪಿ.ಎಂ.ವಿ ಪ್ರತಿವಾದಿ ನಂ. 3, 8 ಮತ್ತು 9 ಪರ ವಕೀಲರಿಂದಃ**

ನನ್ನ ತಂದೆ ಮನಗೇನಪ್ಪ ಇವರಿಗೆ ನಾನು ಮತ್ತು ಪ್ರತಿವಾದಿ ನಂ.1 ರಿಂದ 3 ವಾರಸುದಾರರು. ನನ್ನ ಅಜ್ಜ ಲಕ್ಷ್ಮಪ್ಪನಿಗೆ 4 ಜನ ಮಕ್ಕಳು. ಅವರೆಂದರೆ ಹನಮಂತ , ಮನಗೇನಪ್ಪ , ಸೈದಪ್ಪ ಮತ್ತು ಬಸಪ್ಪ ಅಂತಾ ಇರುತ್ತಾರೆ. ಈಗ ಅವರು ಮೃತರಾಗಿತ್ತಾರೆ.

ನನ್ನ ಅಜ್ಜ ಲಕ್ಷ್ಮಪ್ಪನಿಗೆ ಯಾವುದೇ ರೀತಿಯ ಆಸ್ತಿಯ ಇರಲಿಲ್ಲ ಎಂದರೆ ಮನೆ ಇತ್ತು ಎಂದು ನುಡಿಯುತ್ತಾರೆ. ಮುಂದುವರೆದ ಸದರಿ ಮನೆ ಮುಧೋಳದಲ್ಲಿ ಇದೆ ಎಂದು ನುಡಿಯುತ್ತಾರೆ.ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಈಗ ಯಾರೂ ಇಲ್ಲ, ಅದು ವಾಸಕ್ಕೆ ಯೋಗ್ಯ ಇಲ್ಲ. ಸದರಿ ಮನೆಯು ಉತ್ಪನ್ನ ಬರುವಂತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ನನ್ನ ಅಜ್ಜ ಲಕ್ಷ್ಮಪ್ಪ ಇವರು ಮೃತನಾಗಿದ್ದು , ಅವರ ಹೆಸರಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿ ಮನೆ ಇದೆ ಎಂದು ನುಡಿಯುತ್ತಾರೆ. ಲಕ್ಷ್ಮಪ್ಪ ಇವರಿಗೆ ಯಾವುದೇ ಆಸ್ತಿ ಇಲ್ಲದ ಕಾರಣ ಅವರ ನಾಲ್ಕು ಜನ ಮಕ್ಕಳು ಕೂಡಿ ಇರುವ ಸಂದರ್ಭ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಮನಗೇನಪ್ಪ ಮೃತನಾಗಿದು 30 ವರ್ಷಗಳು ಆಗಿರುತ್ತವೆ. ಅವರು ಮುಧೋಳದಲ್ಲಿ ವಾಸಿಸುತ್ತಿದ್ದರು. ಅವರು ಮುಗಳಖೋಡ ಗ್ರಾಮದಲ್ಲಿ ಮೃತರಾಗಿರುತ್ತಾರೆ . ಅವರ ಎಷ್ಟು ವರ್ಷಗಳಿಂದ ಮುಗಳಖೋಡದಲ್ಲಿ ವಾಸವಾಗಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ತಾನು ಓದಿಲ್ಲದ ಕಾರಣ ನಿಖರವಾಗಿ ಹೇಳಲು ಬರುವುದಿಲ್ಲಾ ಆದರೆ ಅವರು ಮುಧೋಳ ಮತ್ತು ಮುಗಳಖೋಡ ಎರಡೂ ಕಡೆ ಇರುತ್ತಿದ್ದರು ಎಂದು ನುಡಿಯುತ್ತಾರೆ .

ನಾವು ಮುಧೋಳದಲ್ಲಿಯೇ ಜನಿಸಿದ್ದೇವೆ. ನಮ್ಮ ಜನನ ಪ್ರಮಾಣ ಪತ್ರ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಮನಗೇನಪ್ಪ ಅವರು ಮುಗಳಖೋಡದಲ್ಲಿ ದುಡಿಯಲು ಹೋಗುತ್ತಿದ್ದರಿಂದ ಅಲ್ಲಿ ವಾಸಿಸುತ್ತಿದ್ದರು. ಅವರ ಚುನಾವಣಾ ಗುರುತಿನ ಚೀಟಿ ಮುಗಳಖೋಡ ಮತ್ತು ಮುಧೋಳ ಎರಡೂ ವಿಳಾಸದವು ಇದ್ದವು. ಸದರಿ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಮುಗಳಖೋಡದಲ್ಲಿ ನನ್ನ ತಂದೆಗೆ ಯಾವುದೇ ಆಸ್ತಿ ಇರಲಿಲ್ಲ. ಅವರು ಮುಗಳಖೋಡದ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಮನೆಯಲ್ಲಿ ವಾಸಿಸುತ್ತಿದ್ದರು.

ನನ್ನ ಅಜ್ಜನಿಗೆ 4 ಜನ ಗಂಡು ಮಕ್ಕಳು, ದಾವಾ ಆಸ್ತಿಯು ಮೂಲತಃ ನನ್ನ ದೊಡ್ಡಪ್ಪನಾದ ಹನಮಂತ ಇವನು ಹಿರಿಯ ಮಗ ಎಂಬ ಕಾರಣಕ್ಕೆ ನನ್ನ ತಂದೆ ಮತ್ತು ಆತನ ಮೂರು ಜನ ಸಹೋದರಿಗೆ ಸರ್ಕಾರದಿಂದ ಮಂಜೂರಾದ ಜಮೀನು ಆಗಿದೆ ಎಂದು ನುಡಿಯುತ್ತಾರೆ. ಸರ್ಕಾರದಿಂದ ದಾವಾ ಜಮೀನು ನಾಲ್ಕು ಜನರಿಗೆ ಮಂಜೂರಾದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಮಂಜೂರಾದ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿದ್ದೇನೆಂದರೆ, ಸಾಕ್ಷಿ ಎಂ.ಇ ನಂ.468 ದಿಃ 08-08-1959 ನೇದ್ದನ್ನು ಹಾಜರು ಪಡಿಸಿದ್ದಾಗಿ ನುಡಿಯುತ್ತಾರೆ .

ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದು ಸರಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ನಿಪಿ-3 ತಪ್ಪಾಗಿದೆ , ಅದು ಸರಿ ಮಾಡಲು ಕೋರಿ ದಾವೆ ದಾಖಲಿಸಿದ್ದಾಗಿ ನುಡಿಯುತ್ತಾರೆ. ಎಂ.ಇ ನಂ.468 ನೇದ್ದನ್ನು ರದ್ದು ಪಡಿಸಲು ಕೋರಿ ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಯಾವದೇ ಕಾನೂನು ಕ್ರಮ ಕೈಗೊಂಡಿಲ್ಲ. ನನ್ನ ತಂದೆ ಮರಣ ಹೊಂದಿ 30 ವರ್ಷಗಳು ಆಗಿದ್ದು, ಅವರ ನಂತರ ನನ್ನ ತಂದೆಯ ಮಕ್ಕಳಾದ ನಾನು ಮತ್ತು ನನ್ನ ಸಹೋದರರು ಸದರಿ ಡೈರಿ ರದ್ದು ಕೋರಿ ಕಾನೂನಿನ ಕ್ರಮ ಕೈಗೊಂಡಿದ್ದೇವೆ ಅದೇ ಕಾರಣಕ್ಕೆ ಈ ದಾವೆ ದಾಖಲಿಸಿದ್ದಾಗಿ ನುಡಿಯುತ್ತಾರೆ.

ದಾವಾ ಆಸ್ತಿಯು ನನ್ನ ದೊಡ್ಡಪ್ಪನಾದ ಹನಮಂತನಿಗೆ ಮಾತ್ರ ಸಂಬಂಧಿಸಿದ್ದು, ಅವರಿಗೆ ಮಾತ್ರ ಮಂಜೂರು ಆಗಿದೆ ಎಂದರೆ ಸರಿಯಲ್ಲ. ಅದು ಹನಮಂತನ ಸ್ವಂತಃ ಆಸ್ತಿ ಅಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಸಹಿ/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ